**<u>ದಿ:19-06-2023 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ: ಶ್ರೀ ಎಸ್ ಎಸ್ ವಕೀಲರಿಂದ:</u>**

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಾನು ಹೇಳಿದ ಪ್ರಕಾರ ಪ್ರಮಾಣೀಕರಿಸಿ ನಿಜ ಇರುತ್ತದೆ.

ದಾವಾ ಕೂಡ ಹಾಜರುಮಾಡಿರುವ ದಾಖಲೆಗಳನ್ನು ನೋಡುತ್ತಿದ್ದು ವಂಶವೃಕ್ಷ ಪ್ರಮಾಣಪತ್ರ ನೋಟರಿ ಪ್ರಮಾಣೀಕೃತ ನಿಪಿ-1, ಒಟ್ಟು 3 ಆರ್ ಟಿ ಸಿ ಗಳನ್ನು ನಿಪಿ-2 ರಿಂದ 4 ಎಂದು ಗುರುತಿಸಲಾಯಿತು. ಚಿಕ್ಕಜಾಜೂರು ಗ್ರಾಮಪಂಚಾಯಿತಿ ಆಸ್ತಿಗೆ ಸಂಬಂದಿಸಿದ ಮನೆಯ ಇ-ಸ್ವತ್ತು ದಾಖಲೆ ನಿಪಿ-5, ಒಂದು ಡಿಸಿ ಬಿ ಎಕ್ಸಟ್ರಾಕ್ಟ ನಿಪಿ-6, ನನ್ನ ತಂದೆ ಓಂಕಾರಪ್ಪನವರು ಅವರ ತಂಗಿಯರಿಗೆ ಅಂದರೆ ನನ್ನ ಅತ್ತೆಯಂದಿರಿಗೆ ಮಾಡಿದ ದಾನ ಪತ್ರದ ದೃಡೀಕೃತ ನಕಲು ಹಾಜರು ಮಾಡಿದ್ದು ಅದರ ಅಸಲು ದಾಖಲೆಗಳು ಶಕುಂತಲಮ್ಮ, ಮಂಜುಳ , ವಿಮಲಮ್ಮ, ಉಶಾ, ಆಶಾ ರವರ ಬಳಿ ಇದೆ ಸದರಿ ದಾಖಲೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಪ್ರತಿವಾದಿ 2 ರಿಂದ 6 ನೇ ಪ್ರತಿವಾದಿಯರು 7 ನೇ ಪ್ರತಿವಾದಿಗೆ ಮಾಡಿಕೊಟ್ಟ ಶುದ್ಧ ಕ್ರಯ ಪತ್ರ ದೃಡೀಕೃತ ನಕಲು ನಿಪಿ-8 ಎಂದು ಗುರುತಿಸಲಾಯಿತು.

ಮೆಮೊದೊಂದಿಗೆ ಹಾಜರು ಮಾಡಿದ ದಾಖಲೆಗಳನ್ನು ನೋಡುತ್ತಿದ್ದು 18-01-2021 ರಲ್ಲಿ ಆದ ಪಾಲು ಪಾರಿಕತ್ ಯಾನೆ ವಿಬಾಗ ಪತ್ರ ಇದರ ದೃಡೀಕೃತ ನಕಲು ಅದರ ಅಸಲು ದಾಖಲೆ 2 ರಿಂದ 6 ನೇ ಪ್ರತಿವಾದಿಯರ ಬಳಿ ಇದೆ ಎಂದು ಹೇಳಿದ್ದು ಆದ್ದರಿಂದ ನಿಪಿ-9 ಎಂದು ಗುರುತಿಸಲಾಯಿತು. ಒಟ್ಟು 5 ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು ಕ್ರಮವಾಗಿ ನಿಪಿ-10 ರಿಂದ 14 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಲಾಗಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ